ಓ ಎಸ್ ನಂ.7/2023
ಪಿ.ಡಬ್ಲ್ಯೂ-1 ಸೈಯದ ನಜಮಾ ಗಂಡ ಅಬ್ದುಲ ಖಾಲಿಕ್

**(ಇಂದು ದಿನಾಂಕಃ 21-11-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.)**

ಪಾಟೀ ಸವಾಲುಃ ೧ ರಿಂದ ೪ನೇ ಪ್ರತಿವಾದಿಗಳ ಪರ ಶ್ರೀ ಎಂ ಎ ಜೆ ವಕೀಲರಿಂದ.

ನಾನು ಕಳೆದ ೧೫ ವರ್ಷಗಳಿಂದ ಅಫಜಲಪೂರ ನ್ಯಾಯಾಲಯಕ್ಕೆ ಓಡಾಡುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಮೊದಲು ನಾನು ಈಗಿನ ನಮ್ಮ ವಕೀಲರ ಮೂಲಕವೆ ಮೊದಲೂ ಕೂಡಾ ಕೇಸು ನ್ಯಾಯಾಲಯದಲ್ಲಿ ಹಾಕಿದ್ದೆ ಎಂದರೆ ಸರಿಯಲ್ಲ. ನಾವು ೪ ಜನ ಸಹೋದರಿಯರು ಇರುತ್ತೇವೆ. ನನಗೆ ರೇಷ್ಮಾ, ಸೈಮಾ, ಸಲ್ಮಾ ಎಂಬ ೩ ಜನ ಸಹೋದರಿಯರು ಇರುತ್ತಾರೆ. ಆಸ್ಮಾ ನನ್ನ ಗಂಡನ ಮೊದಲನೆ ಹೆಂಡತಿಯಾಗಿರುತ್ತಾರೆ. ನಾನು ನನ್ನ ಗಂಡನ ೨ನೇ ಹೆಂಡತಿಯಾಗಿರುತ್ತೇನೆ. ನನ್ನ ಗಂಡನಿಗೆ ೯ ಜನ ಹೆಂಡತಿಯರು ಇರುತ್ತಾರೆ ಎಂದರೆ ಸರಿಯಲ್ಲ. ಆಸ್ಮಾರವರ ತಂದೆಯ ಹೆಸರು ನನಗೆ ಗೊತ್ತಿಲ್ಲ. ನನ್ನ ತಂದೆಯ ಹೆಸರು ಮಹಮದ ಈಗು ಆಗಿರುತ್ತದೆ. ೨೦೦೪ ರಲ್ಲಿ ನನ್ನ ಗಂಡ ಮೃತರಾಗಿರುತ್ತಾರೆ. ನನ್ನ ಗಂಡನ ಕೊಲೆ ಆಗಿರುತ್ತದೆ ಎಂದರೆ ಸರಿ. ಮುಂಬೈನಲ್ಲಿ ನನ್ನ ಗಂಡ ಗುಂಡಾಗಿರಿ ಮಾಡುತ್ತಿದ್ದರು ಎಂದರೆ ಸರಿಯಲ್ಲ.

೨. ಖಾಲಿಕ್ ರವರ ಜೊತೆಗೆ ನನ್ನ ಮದುವೆ ಯಾವ ದಿನಾಂಕದಂದು ಮತ್ತು ಎಲ್ಲಿ ಆಗಿದೆ ಎಂದು ಏನು ದಾಖಲೆ ಹಾಜರುಪಡಿಸಿರುತ್ತೇನೆ ನನಗೆ ನೆನಪಿಲ್ಲ. ಸಾಕ್ಷಿಯು ಆಧಾರಕಾರ್ಡ ಹಾಜರುಪಡಿಸಿರುತ್ತೇನೆ ಎನ್ನುತ್ತಾರೆ. ನನ್ನ ಮದುವೆ ದಿನಾಂಕ 11-02-1988 ರಲ್ಲಿ ಆಗಿರುತ್ತದೆ. ಸದರಿ ದಿನಾಂಕವನ್ನು ದಾವೆಯಲ್ಲಿ ಬರೆಸಿದ ಬಗ್ಗೆ ನನಗೆ ನೆನಪಿಲ್ಲ. ನನಗೆ ೮ ಜನ ಮಕ್ಕಳು ಇರುತ್ತಾರೆ, ಅದರಲ್ಲಿ ೧ ಮಗು ಮೃತವಾಗಿರುತ್ತದೆ. ನನ್ನ ಮಕ್ಕಳ ಕುರಿತು

ದಾಖಲೆಗಳನ್ನು ನಾನು ಹಾಜರುಪಡಿಸಿರಬಹುದು, ಅದು ನನಗೆ ನೆನಪಿಲ್ಲ. ನನ್ನ ಮಕ್ಕಳನ್ನು ಈ ದಾವೆಯಲ್ಲಿ ನಾನು ಸೇರ್ಪಡೆ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿದಂತೆ ನನ್ನ ಮದುವೆ ಆಗಿರುವುದಿಲ್ಲ, ನಾನು ಆಸ್ಮಾರವರ ಸಹೋದರಿ ಮಾತ್ರ ಇರುತ್ತೇನೆ ಎಂದರೆ ಸರಿಯಲ್ಲ. ೨೦೧೭-೧೮ ರಲ್ಲಿ ಆಸ್ಮಾರವರು ನ್ಯಾಯಾಲಯದಲ್ಲಿ ದಾವೆ ಹಾಕಿದ್ದರು ಎಂದರೆ ಸಾಕ್ಷಿಯು ಅದು ನನಗೆ ನಂತರ ಗೊತ್ತಾಗಿರುತ್ತದೆ ಎನ್ನುತ್ತಾರೆ. ನಾನು ಈ ದಾವೆ ಹಾಕಿದ ನಂತರ ಆಸ್ಮಾರವರೂ ಕೂಡಾ ದಾವೆ ಹಾಕಿದ ವಿಚಾರ ನನಗೆ ಗೊತ್ತಾಗಿರುತ್ತದೆ.

೩. ಆಸ್ಮಾರವರು ಇದೆ ದಾವಾ ಜಮೀನುಗಳ ಕುರಿತು ಇದೆ ನ್ಯಾಯಾಲಯದಲ್ಲಿ ತಮ್ಮ ಸಾಕ್ಷ್ಯ ನುಡಿದಿದ್ದರು ಎಂದರೆ ಸಾಕ್ಷಿಯು ಅದು ನನಗೆ ನಂತರ ಗೊತ್ತಾಗಿರುತ್ತದೆ ಎನ್ನುತ್ತಾರೆ. ನಾನು ಸೂರ್ಯಕಾಂತ, ಮೈಬೂಬ, ಶಾವರ ಸಿದ್ದ ಮತ್ತು ಸಿದ್ದರಾಮ ಎಂಬುವವರ ಮೇಲೆ ದಾವೆ ಹಾಕಿರುತ್ತೇನೆ. ಅವರಲ್ಲಿ ಯಾರು ಯಾರಿಗೆ ಜಮೀನು ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಮೈಬೂಬರವರು ಸೂರ್ಯಕಾಂತರವರಿಗೆ ಮತ್ತು ನಂತರ ಮೈಬೂಬರವರು ಶಾವರ ಸಿದ್ದ ಮತ್ತು ಸಿದ್ದರಾಮರವರಿಗೆ ಜಮೀನು ಮಾರಾಟ ಮಾಡಿರುತ್ತಾರೆ. ೨೦೧೩ ರಲ್ಲಿ ಮೈಬೂಬರವರು ಸೂರ್ಯಕಾಂತರವರಿಗೆ ೧೭ ಎಕರೆ ೧೭ ಗುಂಟೆ ಜಮೀನು ಮಾರಾಟ ಮಾಡಿರುತ್ತಾರೆ. ಅದು ಒಂದೆ ಖರೀದಿ ಪತ್ರದಲ್ಲಿ ಮಾರಾಟಗೊಂಡಿರುತ್ತದೆ. ಸದರಿ ಖರೀದಿ ಪತ್ರದಲ್ಲಿ ಇದ್ದ ಚೆಕ್ಕಬಂದಿಯಲ್ಲಿ ಪೂರ್ವಕ್ಕೆ ಅರ್ಜುನ ಲಂಬಾಣಿ, ಪಶ್ಚಿಮಕ್ಕೆ ಶಿವಪ್ಪ, ಉತ್ತರಕ್ಕೆ ಸರಕಾರಿ ರಸ್ತೆ ಮತ್ತು ದಕ್ಷಿಣಕ್ಕೆ ಸಿದ್ದಪ್ಪರವರನ್ನು ತೋರಿಸಲಾಗಿರುತ್ತದೆ.

೪. ಶಾವರ ಸಿದ್ದ ಮತ್ತು ಸಿದ್ದರಾಮರವರಿಗೆ ೨ ಖರೀದಿ ಪತ್ರದಲ್ಲಿ ೧ನೇ ಪ್ರತಿವಾದಿಯಾದ ಮೈಬೂಬರವರು ಜಮೀನು ಮಾರಾಟ ಮಾಡಿರುತ್ತಾರೆ. ಸಿದ್ದರಾಮರವರಿಗೆ

೩೨ ಗುಂಟೆ ಜಮೀನು ಮಾರಾಟವಾಗಿರುತ್ತದೆ. ಶಾವರ ಸಿದ್ದರವರಿಗೆ ೩ ಎಕರೆ ೩೬ ಗುಂಟೆ ಜಮೀನು ಮಾರಾಟಗೊಂಡಿರುತ್ತದೆ. ಸದರಿ ಖರೀದಿ ಪತ್ರಗಳನ್ನು ನಾನು ನೋಡಿರುತ್ತೇನೆ. ಸದರಿ ಖರೀದಿ ಪತ್ರಗಳಲ್ಲಿ ತಿಳಿಸಿದ ಚೆಕ್ಕುಬಂದಿ ನನಗೆ ಗೊತ್ತು. ಅದನ್ನು ಈಗ ಹೇಳಲು ನನಗೆ ನೆನಪಿಲ್ಲ. ಶಾವರ ಸಿದ್ದ ಮತ್ತು ಸಿದ್ದರಾಮರವರು ಎಷ್ಟು ಜಮೀನಿನಲ್ಲಿ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸಾಕ್ಷಿಯು ಅವರು ಸ್ವಾಧೀನದಲ್ಲಿ ಇರುವುದಿಲ್ಲ ನಾನೆ ಜಮೀನಿನ ಸ್ವಾಧೀನದಲ್ಲಿ ಇರುತ್ತೇನೆ ಎನ್ನುತ್ತಾರೆ. ನಾನು ಆಸ್ಮಾರವರ ಖಾಸಾ ಸಹೋದರಿ ಆಗಿರುತ್ತೇನೆ ಎಂದರೆ ಸರಿ.

೫. ನಾನು ಅಫಜಲಪೂರ ನ್ಯಾಯಾಲಯಕ್ಕೆ ನನ್ನ ಸಹೋದರಿಯ ಜೊತೆಗೆ ಬರುತ್ತಿದ್ದೆ ಎಂದರೆ ಸರಿ. ಸಾಕ್ಷಿಯು ನಾನು ನನ್ನ ಬೇರೆ ಜಮೀನಿನ ಕುರಿತು ನ್ಯಾಯಾಲಯಕ್ಕೆ ಬರುತ್ತಿದ್ದೆ ಎನ್ನುತ್ತಾರೆ. ಸಾಕ್ಷಿಯು ಮುಂದುವರೆದು ನನಗೂ ಮತ್ತು ನನ್ನ ಸಹೋದರಿಯಾದ ಆಸ್ಮಾರವರಿಗೂ ಹೊಂದಾಣಿಕೆ ಇರಲಿಲ್ಲ ಎನ್ನುತ್ತಾರೆ. ನಾನು ಮಣ್ಣೂರ ಗ್ರಾಮದ ಸರ್ವೆ ನಂಬರ ೪೬೮ ರ ಜಮೀನಿನ ಕುರಿತು ಕೇಸು ಹಾಕಿದ್ದೆ. ನಾನು ಸದರಿ ಕೇಸನ್ನೂ ಕೂಡಾ ನಾನು ನನ್ನ ಗಂಡನ ಜಮೀನು ಇರುತ್ತದೆ ಎಂದು ಕೇಳಿ ಸದರಿ ದಾವೆ ಹಾಕಿದ್ದೆ. ನಾನು ನನ್ನ ಕೇಸಿಗೆ ಬಂದು ಹಾಜರಾಗುತ್ತಿದ್ದೆ ಮತ್ತು ಆಸ್ಮಾರವರು ಈ ದಾವಾಸ್ತಿಗಳ ಕುರಿತಾದ ಕೇಸಿಗೆ ನ್ಯಾಯಾಲಯದಲ್ಲಿ ಹಾಜರಾಗುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ.

೬. ದಾವಾ ಜಮೀನುಗಳ ಸರ್ವೆ ನಂಬರ ೩೩೬/೨ ಮತ್ತು ಸರ್ವೆ ನಂಬರ ೩೫/೨ ಇರುತ್ತವೆ. ದಾವಾ ಜಮೀನುಗಳ ಕುರಿತು ಮೊದಲು ದಾವೆ ನಡೆದಿದ್ದ ವಿಚಾರ ನನಗೆ ಮೊದಲು ಗೊತ್ತಿರಲಿಲ್ಲ. ಈ ದಾವೆ ಹಾಕಿದ ನಂತರ ಆಸ್ಮಾರವರು ದಾವಾ ಆಸ್ತಿಗಳ ಕುರಿತು ಕೇಸು ಹಾಕಿದ್ದ ವಿಚಾರ ಮತ್ತು ವಜಾಗೊಂಡ ವಿಚಾರ ನನಗೆ ಗೊತ್ತಾಗಿರುತ್ತದೆ. ಆಸ್ಮಾರವರು

ಸದರಿ ಕೇಸಿನ ಮೇಲೆ ಮೇಲ್ಮನವಿ ಸಲ್ಲಿಸಿ, ಅದೂ ಕೂಡಾ ವಜಾಗೊಂಡಿದೆ ಎಂದರೆ ಸಾಕ್ಷಿಯು ಅದೂ ಕೂಡಾ ನನಗೆ ಈ ದಾವೆ ಹಾಕಿದ ನಂತರ ಗೊತ್ತಾಗಿರುತ್ತದೆ ಎನ್ನುತ್ತಾರೆ. ಆಸ್ಮಾರವರು ಮೊದಲು ಸಲ್ಲಿಸಿದ ದಾವೆ ವಜಾಗೊಂಡಿದ್ದರಿಂದ ನನಗೆ ಈ ದಾವೆಯನ್ನು ಹಾಕುವ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ನನ್ನ ಆಸ್ತಿಗಳ ಕುರಿತು ನನಗೆ ಹಕ್ಕು ಇದೆ ಎನ್ನುತ್ತಾರೆ. ನನಗೆ ಕಂದಾಯಾಧಿಕಾರಿಗಳಿಂದ ಖಾಲಿಕ್ ರವರ ಕುಟುಂಬದ ವಂಶವೃಕ್ಷ ದಾಖಲೆಯನ್ನು ನೀಡಿರುವುದಿಲ್ಲ ಎಂದರೆ ಸಾಕ್ಷಿಯು ಅದನ್ನು ಹಾಜರುಪಡಿಸಿರುತ್ತೇನೆ ಎನ್ನುತ್ತಾರೆ.

೭. ಆಸ್ಮಾರವರು ಮೊದಲು ಹಾಕಿದ ದಾವೆಯಲ್ಲಿನ ಮೂಲ ದಾಖಲೆಗಳನ್ನೆ ನಾನು ಈಗ ನ್ಯಾಯಾಲಯದಲ್ಲಿ ಹಾಜರುಪಡಿಸಿರುತ್ತೇನೆ ಎಂದರೆ ಸಾಕ್ಷಿಯು ವಿಕ್ರಾಂತರವರು ಆಸ್ಮಾರವರನ್ನು ಕೇಳಿ ದಾಖಲೆಗಳನ್ನು ನೀಡಿರುತ್ತಾರೆ ಎನ್ನುತ್ತಾರೆ. ಆಸ್ಮಾರವರು ಯಾವ ದಾಖಲೆಗಳ ಆಧಾರದ ಮೇಲೆ ಕೇಸನ್ನು ದಾಖಲು ಮಾಡಿದ್ದರು ಎಂದು ನನಗೆ ಗೊತ್ತು. ನಾನು ಹಾಜರುಪಡಿಸಿದ ನಿಪಿ-೧ ರಿಂದ ನಿಪಿ-೧೫೫ ರಲ್ಲಿ ಆಸ್ಮಾರವರು ತನ್ನ ಗಂಡ ಖರೀದಿ ಮಾಡಿರುತ್ತೇನೆ ಎಂದು ಹಾಜರುಪಡಿಸಿದ ದಾಖಲೆಗಳನ್ನು ನಾನು ಈ ದಾವೆಯಲ್ಲಿ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿಯು ನನ್ನ ಹತ್ತಿರ ಇದ್ದ ದಾಖಲೆಗಳನ್ನು ನಾನು ಹಾಜರುಪಡಿಸಿರುತ್ತೇನೆ, ಆಸ್ಮಾರವರ ಹತ್ತಿರ ಸ್ವಲ್ಪ ದಾಖಲೆಗಳು ಇರುತ್ತವೆ ಎನ್ನುತ್ತಾರೆ.

೮. ನನ್ನ ಗಂಡ ಯಾವುದೆ ದಾಖಲೆಗಳನ್ನು ಬರೆಸಿರುವುದಿಲ್ಲ. ಈ ದಾವೆಯನ್ನು ದಾಖಲಿಸುವಾಗ ನಮ್ಮ ವಕೀಲರು ನನ್ನ ಗಂಡ ಯಾವುದಾದರು ದಾಖಲೆಯನ್ನು ಬರೆಸಿರುತ್ತಾರೆಯೆ ಎಂದು ಕೇಳಿರುತ್ತಾರೆಯೆ ಎಂದರೆ ಸಾಕ್ಷಿಯು ನನ್ನ ಗಂಡ ಯಾವುದೆ ದಾಖಲೆ ಬರೆಸಿಯೆ ಇರುವುದಿಲ್ಲ, ಅದನ್ನು ನಾನು ಹೇಗೆ ಹಾಜರುಪಡಿಸಲಿ ಎನ್ನುತ್ತಾರೆ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಸಮಯಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಅಫಜಲಪೂರ.